ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 76-81
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಹುನಗುಂದ ತಾಲೂಕಿನ ಶೀಮಲಧಿನ್ನಿಯ ಅಪ್ರಕಟಿತ ಧನುರ್ಧಾರಿ ವೀರಗಲ್ಲು

**ಡಾ. ರೇವಣಸಿದ್ದಪ್ಪ ಎಸ್**
ಸಹ ಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ತ್ವ ವಿಭಾಗ, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ

**Abstract:**
*ನಮ್ಮ ಪೂರ್ವಿಕರ ಬದುಕಿನ ರೀತಿಯ ಬಗೆಗಿನ ಕುತೂಹಲ ನಮ್ಮನ್ನು ಚರಿತ್ರೆಯ ವಿಶಾಲ ಜಗತ್ತಿಗೆ ಕೊಂಡೊಯ್ಯುತ್ತದೆ. ನಮ್ಮ ಪೂರ್ವಿಕರ ಸಾಂಸ್ಕೃತಿಕ ಬದುಕನ್ನು ಅರಿಯಲು ಶಾಸನಗಳಷ್ಟೇ ಅವರ ಕಾಲದ ವೀರಗಲ್ಲುಗಳೂ ಮಹತ್ವ ಹೊಂದಿರುತ್ತವೆ. ವಿಶ್ವಾಸಾರ್ಹವಾದ ಆಧಾರಗಳಾಗಿರುವ ವೀರಗಲ್ಲುಗಳು ನಮ್ಮ ಪೂರ್ವಿಕರ ಬದುಕಿನ ಅನೇಕ ಮಜಲುಗಳನ್ನು ಕಟ್ಟಿಕೊಡುತ್ತವೆ. ಹೀಗೆ ಸುಮಾರು ಒಂದೂವರೆ ದಶಕಗಳಿಂದ ಕ್ಷೇತ್ರಕಾರ್ಯದಲ್ಲಿ ಕಂಡುಬರುವ ಅಪ್ರಕಟಿತ ಶಾಸನಗಳ ಅನ್ವೇಷಣೆ ಮತ್ತು ಪ್ರಕಟಿತ ಶಾಸನಗಳ ಮರುಪರಿಶೀಲನೆ, ಇವನ್ನು ನಡೆಸುತ್ತಾ ಬಂದಿರುವ ನನಗೆ ಆಗಾಗ ಇತರ ಕೆಲವು ಜಿಲ್ಲೆಗಳ ಅಪ್ರಕಟಿತ ಶಾಸನಗಳು, ವೀರಗಲ್ಲುಗಳು, ಮಹಾಸತಿ ಕಲ್ಲುಗಳನ್ನು ಓದುವ ಸಂದರ್ಭಾವಕಾಶಗಳು ಒದಗಿ ಬಂದಿವೆ. ಈಗ ನಾನು ಹೊಸದಾಗಿ ವಿಶ್ಲೇಷಣೆಗೆ ಒಳಪಡಿಸಿರುವ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲೂಕಿನ ಸೀಮಲಧಿನ್ನಿಯ ಅಪ್ರಕಟಿತ ಧನುರ್ಧಾರಿ ವೀರಗಲ್ಲೂ ಸಹ ಒಂದು. ಈ ವೀರಗಲ್ಲಿನಲ್ಲಿ ಅಂತರ್ಗತವಾಗಿರುವ ಕೆಲವೊಂದು ಸಾಂಸ್ಕೃತಿಕ ವಿಚಾರಗಳನ್ನು ಬೆಳಕಿಗಿಡುವುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ.*

**Keywords:** *ಕರ್ನಾಟಕ ಇತಿಹಾಸ, ಶಾಸನಗಳು, ವೀರಗಲ್ಲುಗಳು, ಮಹಾಸತಿ ಕಲ್ಲು, ಧನುರ್ಧಾರಿ ವೀರಗಲ್ಲು*

## ಪೀಠಿಕೆ

ವೀರಗಲ್ಲುಗಳು ಸಮಾಜಕ್ಕಾಗಿ ಜನಸೇವೆಗಾಗಿ ತಮ್ಮ ಜೀವನವನ್ನು ಸಮರ್ಪಿಸಿಕೊಂಡು ಪ್ರಾಣಾರ್ಪಣೆ ಮಾಡಿದ ಸ್ಮರಣ ಶಿಲ್ಪಗಳಾಗಿ ಇವು ಕಂಡುಬರುತ್ತವೆ. ವೀರ ತನ್ನ ಊರು ಪ್ರಾಂತ್ಯ ದೇಶ ರಕ್ಷಣೆಗಾಗಿ ಹೋರಾಟ ಮಾಡಿ ಯುದ್ದದಲ್ಲಿ ಮಡಿದಾಗ ವೀರಗಲ್ಲನ್ನು ನಿಲ್ಲಿಸಿ ಆತನ ಶೌರ್ಯ ದೇಶಪ್ರೇಮವನ್ನು ಸ್ಮರಿಸುವ ನೆಲೆಯಲ್ಲಿ ಲೋಕಕ್ಕೆ ವೀರನ ಪರಾಕ್ರಮ ತಿಳಿದು ಮುಂದಿನ ತಲೆಮಾರಿನವರು ಸಹ ಅಂತಹ ಪರಾಕ್ರಮದ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಇವು ನೆರವಾಗುತ್ತಾ ಬಂದಿದ್ದವು. ಕರ್ನಾಟಕದ ಬಹುತೇಕ ಸ್ಥಳಗಳಲ್ಲಿ ಯುದ್ಧವೀರಗಲ್ಲುಗಳು, ಗಡಿಕಾಳಗದ ಊರಳಿವು ವೀರಗಲ್ಲು, ಪಶುಸಂಪತ್ತಿನ ಸಂರಕ್ಷಣೆಯ ತುರುಗೋಳ್ ವೀರಗಲ್ಲುಗಳು, ಬೇಟೆ ವೀರಗಲ್ಲುಗಳು, ಆತ್ಮ ಬಲಿ ವೀರಗಲ್ಲುಗಳು, ಬಂದೂಕುವೀರಗಲ್ಲುಗಳು ಹೀಗೆ ಅನೇಕ ವಿಧದ ವೀರಗಲ್ಲುಗಳನ್ನು ಕಾಣುತ್ತೇವೆ. ಐತಿಹಾಸಿಕವಾಗಿ ಅನೇಕ ಚಾರಿತ್ರಿಕ ವಿವರಣೆಗಳನ್ನು ಅರಿಯಲು ಸ್ಥಳಿಯ ಚರಿತ್ರೆಯ ಮೇಲೆ ಬೆಳಕು ಚೆಲ್ಲಲು ಇವು ನೆರವಾಗುತ್ತಾ ಬಂದಿವೆ. ಕನ್ನಡನಾಡಿನ ಯೋಧರು “ದೇಹ ಅಳಿದರೂ ದೇಶ ಉಳಿಯಲಿ” ಎಂಬ ಸಮರ್ಪಣಾಭಾವದಿಂದ ಕೈಗೊಂಡ ಕ್ಷಾತ್ರ

***Please cite this article as:*** ರೇವಣಸಿದ್ದಪ್ಪ ಎಸ್. (2026). ಹುನಗುಂದ ತಾಲೂಕಿನ ಶೀಮಲಧಿನ್ನಿಯ ಅಪ್ರಕಟಿತ ಧನುರ್ಧಾರಿ ವೀರಗಲ್ಲು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 4(6), 76–81

ತೇಜಸ್ಸಿನ ಕೈಂಕರ್ಯಗಳು ಇಂತಹ ಶಿಲ್ಪಗಳ ಮೂಲಕ ಚಿರಸ್ಥಾಯಿಯಾಗಿ ಉಳಿದುಕೊಂಡಿವೆ.

ಧಾರ್ಮಿಕವಾಗಿ ತನ್ನದೇ ಆದ ಮಹತ್ವವನ್ನು ಒಳಗೊಂಡಿರುವ ಕೂಡಲಸಂಗಮ ಚಾರಿತ್ರಿಕ ಮನ್ನಣೆ ಪಡೆದ ಸ್ಥಳವಾಗಿದೆ. ಕೂಡಲಸಂಗಮ ಸಮೀಪದ ಹಳ್ಳಿಗಳಲ್ಲಿ ಇಂದಿಗೂ ಐತಿಹಾಸಿಕ ಪಳೆಯುಳಿಕೆಗಳು, ಪ್ರಾಚೀನ ದೇವಾಲಯಗಳು, ಮೂರ್ತಿಶಿಲ್ಪಗಳು ದೊರೆಯುತ್ತಿರುವುದನ್ನು ಕಾಣುತ್ತೇವೆ. ಅಂತೆಯೇ, ಕೂಡಲಸಂಗಮದ ಸಮೀಪಕ್ಕೆ ಚವಡಕಮಲದಿನ್ನಿ ಗ್ರಾಮಕ್ಕೆ ಹೊಂದಿಕೊಂಡ ಬೇಚರಾಕ್ ಗ್ರಾಮವಾದ ಶೀಮಲದಿನ್ನಿಯಲ್ಲಿ ಕಂಡುಬಂದಿರುವ ಧನುರ್ಧಾರಿ ವೀರಗಲ್ಲು, ಅಧ್ಯಯನ ಮತ್ತು ಸಂಶೋಧನಾ ದೃಷ್ಟಿಯಿಂದ ಮಹತ್ವ ಪಡೆದುಕೊಂಡಿದೆ. ಕೂಡಲಸಂಗಮದ ನೆರೆಯ ಗ್ರಾಮಗಳಲ್ಲಿ ದೊರೆತಿರುವ ಪ್ರಥಮ ವೀರಗಲ್ಲು ಇದಾಗಿದೆ. ಇಂತಹ ಅನೇಕ ವೀರಗಲ್ಲುಗಳು ಈ ಭಾಗದಲ್ಲಿ ಇದ್ದಿರುವ ಬಗ್ಗೆ ಚಾರಿತ್ರಿಕ ದಾಖಲೆಯಾಗಿ ದೊರೆಯುವ ಈ ವೀರಗಲ್ಲಿನ ಕುರಿತು ಬೆಳಕು ಚೆಲ್ಲುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.



**ಹುನಗುಂದ ತಾಲ್ಲೂಕಿನ ಶೀಮಲಧಿನ್ನಿಯ ಅಪ್ರಕಟಿತ ಧನುರ್ಧಾರಿ ವೀರಗಲ್ಲು**

ಕೂಡಲಸಂಗಮ ಮ್ಯಾಗೇರಿ ರಸ್ತೆಯ ಬಲಭಾಗಕ್ಕೆ ಕಂಡುಬರುವ ಊರುಗಳಲ್ಲಿ ಮೊದಲನೇಯದು ಚವಡಕಮಲದಿನ್ನಿ ಈ ಊರಿಗೆ ಹೊಂದಿಕೊಂಡಂತೆ ಒಂದು ಕಾಲದಲ್ಲಿ ಜನವಸತಿ ಗ್ರಾಮವಾಗಿದ್ದು, ಪ್ರಸ್ತುತ ಬೇಚರಕ್ ಗ್ರಾಮವಾಗಿರುವ ಶೀಮಲದಿನ್ನಿಯ ಆಂಜನೇಯನ ಗುಡಿಯ ಮುಂಭಾಗದಲ್ಲಿ ಕಂಡುಬಂದಿರುವ ಈ ವೀರಗಲ್ಲು ಸ್ಥಳಿಯರಿಂದ ರಾಮನಕಲ್ಲು ಎಂದು ಕರೆಯಲ್ಪಡುತ್ತಿದೆ.

ವೀರಗಲ್ಲು ದೊರೆತಿರುವ ಹೊಲದ ಮಾಲೀಕರಾದ ವಾಲೀಕಾರ ಅವರು ನೀಡುವ ಮಾಹಿತಿ ಅನ್ವಯ ಈ ಊರು ಸಿಡಿಲಿನ ಹೊಡೆತಕ್ಕೆ ಹಾನಿಗೊಂಡು ನಾಶವಾಗಿದೆ. ಈ ವಿಚಾರವನ್ನು ಪಕ್ಕದ ಹಳ್ಳಿಯ ಹಿರಿಯರು ಭಜನಾಕಲಾವಿದರು ಆಗಿರುವ ಸಂಗಪ್ಪ ಸಿದ್ರಾಮಪ್ಪ ಗೌಡರ ಅವರೂ ಸಾಕ್ಷೀಕರಿಸುತ್ತಾರೆ. ಇವರ ಪುತ್ರ ರಾಮಣ್ಣ ಗೌಡರ ಅವರು, ಇಂತಹ ಒಂದೆರಡು ಕಲ್ಲುಗಳು ಕೆಲ ವರ್ಷಗಳ ಹಿಂದೆ ತಮ್ಮ ಊರಾದ ಶೀಮಲದಿನ್ನಿಗೆ ಹೊಂದಿಕೊಂಡಂತೆ ಇರಲಾದ ಚವಡಕಮಲದಿನ್ನಿ ಯಲ್ಲಿ ಕೂಡಾ ಕಂಡುಬಂದಿದ್ದವು ಎಂದು ನೆನಪು ಮಾಡಿಕೊಳ್ಳುತ್ತಾರೆ. ಕೃಷಿನೆಲೆಯ ನಮಗೆ ಅವುಗಳ ಐತಿಹಾಸಿಕ ಪಾರಂಪರಿಕ ಮಹತ್ವ ಅಷ್ಟೊಂದು ತಿಳಿಯದು, ಯಾರಾದರೂ ಅಧ್ಯಯನಕಾರರು ಬಂದರೆ ಎಲ್ಲಾ ಗ್ರಾಮಸ್ಥರ ನೆರವಿನೊಂದಿಗೆ ಸಹಕಾರ ಒದಗಿಸಲಾಗುವುದು ಎಂದು ಹೇಳುತ್ತಾರೆ.

ಒಂದು ಅಂದಾಜಿನ ಪ್ರಕಾರ ಈ ಗ್ರಾಮ ನಿರಂತರ ಮಳೆ, ಸಿಡಿಲು, ಪ್ರವಾಹದ ಹೊಡತಕ್ಕೆ ಹಾನಿಗೊಂಡಿದ್ದರೂ, ಜನರ ಬಾಯಲ್ಲಿ ಸಿಡಿಲಿನಿಂದಲೇ ಹಾಳಾಗಿದೆ ಎಂಬ ಐತಿಹ್ಯ ನಂಬಿಕೆಗಳು ಉಳಿದುಕೊಂಡು ಬಂದಿವೆ. ನದಿ ದಡದ ಸಮೀಪದಲ್ಲಿಯೇ ಈ ಗ್ರಾಮ ಇರುವುದರಿಂದ ಇದರ ನಾಶಕ್ಕೆ ಪ್ರವಾಹದ ನೆರೆಹಾವಳಿಯ ಸಾದ್ಯತೆ ಇದ್ದದ್ದು ನಂಬಲರ್ಹ ಎನಿಸುತ್ತದೆ. ಅಂದಿನ ಕಾಲದ ಭೀಕರ ರೋಗ ರುಜಿನಗಳು, ಅಕ್ಕ ಪಕ್ಕದ ಗ್ರಾಮಗಳ ಸಂಘರ್ಷ, ಲೂಟಿಕೋರರ ಹಾವಳಿ,

ಬರಗಾಲದಂತಹ ಸಂದರ್ಭ, ಗುಳೆ ಹೋಗಿರುವುದು ಹೀಗೆ ಅನೇಕ ಕಾರಣಗಳಿಂದ ಗ್ರಾಮ ಇಂದು ನಾಮಾವಶೇಷವಾಗಿ ಬೇಚರಾಕ್ ಗ್ರಾಮವೆನಿಸಿಕೊಂಡಿದೆ. ಈ ಗ್ರಾಮ ಇದ್ದಿದ್ದರ ಕುರುಹಾಗಿ ದಿಣ್ಣೆಗಳಾಗಿ ಬಿದ್ದಿರುವ ಹಾಳು ಮಣ್ಣು, ಆಂಜನೇಯನ ಗುಡಿ, ಕೆಲ ಶಿಲ್ಪಗಳು ಇತ್ಯಾದಿ ಕಂಡುಬರುತ್ತವೆ. ಊರಿನ ಹೆಸರೇ ಸೂಚಿಸುವಂತೆ ಶೀಮಲದಿನ್ನಿ, ಸೀಮೆಗಳ ಒಡೆತನಕ್ಕೂ ಸಂಬಂಧಿಸಿದ ಹಿನ್ನಲೆಯನ್ನು ಹೊಂದಿದೆ. ಈ ಕುರಿತು ಹೆಚ್ಚಿನ ಅಧ್ಯಯನ ನಡೆಯಬೇಕಿದೆ. ಈ ವೀರಗಲ್ಲು ಸೀಮಿಯನ್ನು ಕಾಯುವ ಅಂದಿನ ಯೋದರ ಶಿಲ್ಪ ಆಗಿರಬಹುದೇ ಇದೂ ಕೂಡಾ ಪರಾಮರ್ಶೆಗೆ ಒಳಪಡಬೇಕಾಗಿದೆ.

ಇಲ್ಲಿಗೆ ಸುಮಾರು 20 ರಿಂದ 25 ವರ್ಷಗಳ ಹಿಂದೆ ಪ್ರತಿ ವರ್ಷ ಸಂಗಮದ ಜಾತ್ರೆಯ ಕಾಲಕ್ಕೆ ಊರಿನ ಮನೆಮಾಳಿಗೆಗಳನ್ನು ಸಾರಿಸಲು ಈ ಹೊಲದ ಬದುವಿಗೆ ಹೊಂದಿಕೊಂಡಂತೆ ಇರುವ ಹಾಳುಮಣ್ಣನ್ನು ತಂದು ಮನೆಮಾಳಿಗೆ ಸಾರಿಸಲು ಬಳಸುತ್ತಿದ್ದ ಸಂದರ್ಭವನ್ನು ಈಗಲೂ ಇಲ್ಲಿನ ಹಿರಿಯರು ನೆನೆಪಿಸಿಕೊಳ್ಳುತ್ತಾರೆ. ಇಲ್ಲಿನ ಗ್ರಾಮಸ್ಥರು ಹೇಳುವ ಪ್ರಕಾರ, ಈ ಗ್ರಾಮಕ್ಕೆ ಸಂಬಂಧಿಸಿದ ಅನೇಕ ಅಪರೂಪದ ವಸ್ತುಗಳು, ಶಿಲಾಮೂರ್ತಿಗಳು ದೊರೆಯುತಿದ್ದರೂ ಅವುಗಳು ಸಂರಕ್ಷಣೆಗೊಂಡಿಲ್ಲ. ಇದೇ ರೀತಿಯ ಮಣ್ಣನ್ನು ಸಂಗಮ ಭಾಗದ ಮಲಪ್ರಭಾ ನದಿಯ ದಡದಲ್ಲಿರುವ ಲಕ್ಕಮ್ಮದೇವಿ ಗುಡಿಯ ಸಮೀಪದಲ್ಲೂ ದೊರೆಯುತ್ತಿದ್ದು ಅಲ್ಲಿಂದಲೂ ಸಾಕಷ್ಟು ಮಣ್ಣು ತರಲು ಜನರು ತಂಡ ತಂಡವಾಗಿ ಹೋಗುತ್ತಿದ್ದ ಬಗ್ಗೆ ಸ್ಥಳೀಯ ಹಿರಿಯರು ಜ್ಞಾಪಿಸಿಕೊಳ್ಳುತ್ತಾರೆ. ಈ ಕಾರಣಕ್ಕೆ ಶೀಮಲದಿನ್ನಿಯನ್ನು ಹೆಚ್ಚಿನ ಪುರಾತತ್ತ್ವೀಯ ಅಧ್ಯಯನಕ್ಕೆ ಒಳಪಡಿಸಿದರೆ ಕೂಡಲಸಂಗಮದ ಇತಿಹಾಸದ ಅಧ್ಯಯನಕ್ಕೆ ಕೆಲವು ಆಕರಗಳು ದೊರೆಯುವ ಸಾಧ್ಯತೆಗಳಿವೆ.

ಹೊಲದ ಮಾಲೀಕರಾದ ಆಸ್ಪಾಕ್ ಬಾಪೂಸಾಹೇಬ ವಾಲೀಕಾರ ಅವರು ತಿಳಿಸುವಂತೆ, ಕೂಡಲ ಸಂಗಮದ ಹಿರಿಯರಾಗಿದ್ದ ದಿ. ಬಾಪೂಸಾಹೇಬ ವಾಲೀಕಾರ ಅವರ ಪೂರ್ವಜರಿಗೆ ಆಗಿನ ಕಾಲಕ್ಕೆ ೧೨ ಕೂರಿಗೆ ವಾಲೀಕಾರಿಕೆ ಇನಾಂ ಆಗಿ ಈ ಜಮೀನನ್ನು ನೀಡಲಾಗಿತ್ತಂತೆ. ಶೀಮಲದಿನ್ನಿ ಗ್ರಾಮದ ೨೩೨ ಸರ್ವೆನಂಬರಿನ ವ್ಯಾಪ್ತಿಗೆ ಒಳಪಟ್ಟಿರುವ ಈ ಹೊಲದಲ್ಲಿ, ಆಂಜನೇಯ ಗುಡಿ ಮತ್ತು ಇತರೆ ವಿಗ್ರಹಗಳು ಕಂಡುಬಂದಿವೆ. ಗುಡಿಯ ಮುಂಭಾಗದಲ್ಲಿಯೇ ಪ್ರಸ್ತುತ ಧನುರ್ಧಾರಿ ವೀರಗಲ್ಲು ಇರುವುದು. ಶ್ರೀಮತಿ ಜುಲೇಖಾ ಬಾಪೂಸಾಹೇಬ ವಾಲೀಕಾರ ಅವರು ತಮ್ಮ ಹೊಲದಲ್ಲಿ ಈ ಬಗೆಯ ಒಂದೆರಡು ಶಿಲ್ಪಗಳನ್ನು ಮತ್ತು ಅಕ್ಕಪಕ್ಕದ ಹೊಲಗಳಲ್ಲಿಯೂ ಇಂತಹ ಶಿಲ್ಪಗಳನ್ನು ನೋಡಿರುವುದಾಗಿ ತಿಳಿಸುತ್ತಾರೆ. ಅಧ್ಯಯನಕ್ಕೆ ಒಳಪಡಿಸಿರುವ ಈ ವೀರಗಲ್ಲು ಇಂದಿಗೂ ದೇವಾಲಯದ ಮುಂಭಾಗದಲ್ಲಿ ಬಹಳ ವರ್ಷಗಳಿಂದ ಇರುವುದನ್ನು ಅವರು ನೆನೆಯುತ್ತಾರೆ. ತಮ್ಮ ಒಡೆತನದ ಹೊಲದಲ್ಲಿರುವ ಆಂಜನೇಯನ ಗುಡಿಯ ಮರುನಿರ್ಮಾಣ ಕಾರ್ಯಕ್ಕೆ ಸ್ವತಃ ವಾಲೀಕಾರ ಮನೆತನದ ಸದಸ್ಯರು ತೋರಿದ ಆಸಕ್ತಿ, ಭಕ್ತಿ–ಭಾವದ ಸಂಗತಿಗಳನ್ನು ಗಮನಿಸಿದರೆ, ಈ ಗ್ರಾಮದಲ್ಲಿರುವ ಧಾರ್ಮಿಕ ಸಾಮರಸ್ಯ ಗಮನಾರ್ಹವೆನಿಸುತ್ತದೆ. ಹೊಲದ ಭೇಟಿಯ ಪ್ರತಿ ಸಂದರ್ಭದಲ್ಲಿಯೂ ಶೀಮಲದಿನ್ನಿ ಆಂಜನೇಯನನ್ನು ಭಕ್ತಿ–ಭಾವದಿಂದ ಆರಾಧಿಸುತ್ತಿರುವ ನಡೆ ಅನುಕರಣೀಯವಾಗಿದೆ. ಈ ಭಾಗದ ಚಾರಿತ್ರಿಕ ಸಂಗತಿಗಳು ದಾಖಲಾಗಿ ಮುಂದಿನ ತಲೆಮಾರಿಗೆ ಪರಂಪರೆಯನ್ನು ಪರಿಚಯಿಸುವ ಕಾರ್ಯ ನಡೆಯಲಿ ಎಂದು ಪೋಲೀಸ್ ನೌಕರರಾಗಿದ್ದು, ಕೃಷಿಯಲ್ಲಿ ಉತ್ತಮ ಸಾಧನೆ ಮಾಡುತ್ತಿರುವ ವಾಲೀಕಾರ ಮನೆತನದ ಆಸ್ಪಾಕ ಬಾಪೂಸಾಹೇಬ ವಾಲೀಕಾರ ಅವರ ಮಹದಾಸೆಯಾಗಿದೆ.

ಶೀಮಲದಿನ್ನಿ ಗ್ರಾಮದ ಹನುಮಂತ ದೇವರ ಗುಡಿಯ ಪೂಜಾರಿಕೆಯನ್ನು ವಂಶಪಾರಂಪರಿಕವಾಗಿ ಮಾಡುತ್ತಾ ಬಂದಿರುವ ನಾಯ್ಕೋಡಿ(ಪೂಜಾರಿ) ಮನೆತನದ ಹಿರಿಯರಾದ ಶ್ರೀಯುತ ಗಿರಿಯಪ್ಪ ದ್ಯಾವಪ್ಪ ನಾಯ್ಕೋಡಿ ಅವರು ತಿಳಿಸುವ ಸಂಗತಿಗಳು ಗಮನೀಯವಾಗಿವೆ. ಇವರ ಪ್ರಕಾರ ಈ ವೀರಗಲ್ಲನ್ನು ಅನೇಕ ವರ್ಷಗಳಿಂದಲೂ ದೇವಾಲಯದ ಮುಂಭಾಗದಲ್ಲಿಯೇ ಕಾಣುತ್ತಾ ಬಂದಿದ್ದೇವೆ. ಇದರಲ್ಲಿನ ಬಾಣದ ಚಿತ್ರ ಮತ್ತು ವ್ಯಕ್ತಿಯ ಚಿತ್ರವನ್ನು ಆಧರಿಸಿ, ಹಿರೀಕರ ಕಾಲದಿಂದಲೂ ರಾಮನಿಗೂ–ಹನುಮಂತನಿಗೂ ಇರುವ ಶ್ರದ್ಧಾಭಕ್ತಿಯ ನಂಟನ್ನು ಗಮನಿಸಿ ಅದನ್ನು ರಾಮನಗಲ್ಲು ಎಂದೇ ಕರೆಯುತ್ತಾ ಬಂದಿರುವುದಾಗಿ ತಿಳಿಸುತ್ತಾರೆ. ಅದರ ಸಮೀಪಕ್ಕೆ ಭಗ್ನಗೊಂಡ ನಂದಿಯ ವಿಗ್ರಹ, ಬಾಲಗಲ್ಲು ಎಂದು ಕರೆಯುವ ಮಾಲಗಂಭ ಮಾದರಿಯ ಕಂಬ, ಈ ಹಿಂದೆ ಹೊರಗಡೆ ಇಡಲಾಗಿದ್ದ ನಾಗದೇವರ ಮೂರ್ತಿಗಳನ್ನು ಪ್ರಸ್ತುತ ಹನುಮಂತದೇವರ ಗುಡಿಯ ಗೋಡೆಗೆ ಹೊಂದಿಕೊಂಡಂತೆ ಪ್ರತಿಷ್ಠಾಪಿಸಲಾಗಿದೆ. ಇವರ ಅಜ್ಜಿ ದಿ. ಬಾಲಮ್ಮ ಗಿರಿಯಪ್ಪ ನಾಯ್ಕೋಡಿಯವರು ಇವರಿಗೆ ತಿಳಿಸಿದ್ದ ಮಾಹಿತಿಯ ಪ್ರಕಾರ, ಇಂದಿನ ಬೇಚರಾಕ್ ಗ್ರಾಮವಾಗಿರುವ ಶೀಮಲದಿನ್ನಿ, ಒಂದು ಕಾಲಕ್ಕೆ ಬೆಂಕಿ ಮಳೆಯ ಅನಾಹುತಕ್ಕೆ ಹಾನಿಯಾಗಿ ನಾಶಗೊಂಡಿತ್ತಂತೆ. ಇಂದಿಗೂ ಇಲ್ಲಿರುವ ಮನೆಗಳ ಹಾಳುಮಣ್ಣಿನ ದಿಣ್ಣೆಯ ಅವಶೇಷಗಳು ಈ ಮಾತನ್ನು ಪುಷ್ಠೀಕರಿಸುವಂತಿವೆ.

ಪ್ರಸ್ತುತ ಶೀಮಲದಿನ್ನಿಯಲ್ಲಿ ಕಂಡಬಂದಿರುವ ಈ ವೀರಗಲ್ಲು ಬೇಟೆಗಾರನೊಬ್ಬ ಯಾವುದೋ ಪ್ರಾಣಿಯೊಂದಿಗೆ ಅಥವಾ ಗ್ರಾಮ ಅಥವಾ ಸಮುದಾಯದ ರಕ್ಷಣೆಯ ಮಹಾದುದ್ದೇಶಕ್ಕೆ ಹೋರಾಡಿ ಮರಣ ಹೊಂದಿದ ವೀರನಿಗಾಗಿ ನೆಟ್ಟಿರುವ ಶಾಸನರಹಿತ ವೀರಗಲ್ಲಾಗಿದೆ. ಇತಿಹಾಸದ ಜ್ಞಾನಕೋಶದಂತಿರುವ ಈ ವೀರಗಲ್ಲಿನ ರಚನೆಗೆ ಬಳಸಿರುವ ಕಲ್ಲಿನ ಎತ್ತರ ೨೨ ಸೆ.ಮೀ. ಅಗಲ ೧೮ ಸೆ.ಮೀ, ಸುಮಾರು ೬ ಸೆಂ.ಮೀ. ದಪ್ಪ ಇದೆ. ಈ ಶಿಲ್ಪ ಮತ್ತು ಶಿಲ್ಪಶೈಲಿಯನ್ನು ಗಮನಿಸಿದರೆ ಇದು ಕಲ್ಯಾಣ ಚಾಲುಕ್ಯರ ಕಾಲದ್ದು ಇರಬಹುದು. ಇದರಲ್ಲಿ ಕಾಣಿಸಿರುವ ವೀರನು ಒಂದು ಗ್ರಾಮ ಅಥವಾ ಸಮುದಾಯದ ಪ್ರಮುಖ ಮುಖಂಡ ಅಥವಾ ಆಡಳಿತಗಾರನಾಗಿದ್ದಂತೆ ತೋರುತ್ತದೆ. ಸರ್ವಾಲಂಕೃತಗೊಂಡ ವೀರನನ್ನು ಇಲ್ಲಿ ತೋರಿಸಲಾಗಿದೆ. ಬೇಟೆ ಅಥವಾ ಹೋರಾಟಕ್ಕೆ ಸಿದ್ಧಗೊಂಡಿರುವ ಸಿದ್ಧಭಂಗಿಯಲ್ಲಿ ನಿಂತಿರುವ ಈ ವೀರನು ಶಿರ ರಕ್ಷಕ ಅಥವಾ ಕಿರೀಟವನ್ನೋಲುವ ಶಿರಸ್ತ್ರಾಣವನ್ನು ಧರಿಸಿದ್ದಾನೆ. ಕಿವಿಗಳಲ್ಲಿ ಕರ್ಣಾಭರಣಗಳನ್ನು ಧರಿಸಿದ್ದು ಅವು, ಸುಂದರ ಅಲಂಕಾರಿಕ ಕೆತ್ತನೆಗಳಿಂದ ಕೂಡಿವೆ. ಈ ಶಿಲ್ಪ ಒಂದಷ್ಟು ಸವಕಲುಗೊಂಡಿದ್ದು, ಧನುರ್ಧಾರಿ ವೀರನು ಹಿಡಿದಿರುವ ಬಿಲ್ಲು ಮತ್ತು ಬಾಣ ವಿಶೇಷ ರಚನಾತ್ಮಕ ಕೆತ್ತನೆಗಳಿಂದ ಕೂಡಿದೆ. ಬಾಗಿದ ಬಿಲ್ಲಿನ ತುದಿಗಳಿಗೆ ನೂಲನ್ನು ಕಟ್ಟಿರುವುದನ್ನು ಗಮನಿಸಿದರೆ, ಆ ನೂಲು ಜಾರದಂತೆ ಬಿಲ್ಲಿನ ದಂಡದ ತುದಿಗಳಲ್ಲಿ, ಒಂದು ವಿಶಿಷ್ಠ ರೀತಿಯ ಗುಂಡಿನ ರಚನೆಯನ್ನು ಮಾಡಲಾಗಿದೆ. ಇದು ಈ ಶಿಲ್ಪದಲ್ಲಿ ಸ್ಪಷ್ಟವಾಗಿ ಕಂಡುಬರುತ್ತಿದ್ದು, ನೂಲ(ದಾರವನ್ನು)ನ್ನು ಧನುರ್ಧಾರಿ ಬಾಣಸಹಿತ ಎಳೆದು ಹಿಡಿದಿರುವ ಶೈಲಿಯ ಕೆತ್ತನೆ ಅತ್ಯಂತ ನೈಜತೆಯನ್ನು ತೋರ್ಪಡಿಸುತ್ತಿದೆ.

ಬಿಲ್ಲನ್ನು ಹಿಡಿದಿರುವ ಕೈಯ ಮಣಿಕಟ್ಟನ್ನು ಗಮನಿಸಿದರೆ ಅಲಂಕೃತ ಬಳೆಯ ರೀತಿಯ ಆಭರಣವನ್ನು ಧರಿಸಿದ್ದಾನೆ. ಇದು ಆಭರಣವನ್ನು ಹೋಲುತ್ತಿದ್ದರೂ ಮಣಿಕಟ್ಟು ಸಡಿಲಗೊಳ್ಳದಿರಲೆಂದು, ಕೈಕೀಲು ರಕ್ಷಣೆಗಾಗಿ ಕಟ್ಟಿಕೊಂಡಿರುವ ಬಿಗಿಪಟ್ಟಿನಂತೆ ತೋರುತ್ತದೆ. ಇಂದಿಗೂ ಒಲಂಪಿಕ್ ಧನುರ್ಧಾರಿ ಕ್ರೀಡಾಪಟುಗಳು ತಮ್ಮ ಕೈ ಮತ್ತು ತೋಳಿನ ನಡುವಿನ ಕೀಲುಗಳು ಸಡಿಲಗೊಳ್ಳದೇ, ಕೈ ಚಲನೆಗೆ ಸಹಾಯಕವಾಗಲೆಂದು ಬಟ್ಟೆಯ ಕೈಪಟ್ಟುಗಳನ್ನು ಕಟ್ಟಿಕೊಳ್ಳುತ್ತಿರುವುದನ್ನು ಗಮನಿಸಬಹುದು. ಅದೇ

ರೀತಿಯ ವ್ಯವಸ್ಥೆ ನಮಗೆ ಸುಮಾರು ಕ್ರಿ.ಶ. ೧೧–೧೨ನೇ ಶತಮಾನದಷ್ಟು ಪೂರ್ವದಲ್ಲಿಯೇ ಇತ್ತು ಎನ್ನುವುದು ವಿಶೇಷ ಮತ್ತು ಇಂದಿನ ಇಂತಹ ರಕ್ಷಣಾತ್ಮಕ ವ್ಯವಸ್ಥೆಗೆ ಪ್ರಾಚೀನ ಆಧಾರ ಕಂಡುಬಂದಿರುವುದು ತುಂಬಾ ವಿರಳ, ಅದು ನಮ್ಮ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲೂಕಿನ ಶೀಮಲಧಿನ್ನಿಯಲ್ಲಿ ಕಂಡುಬಂದಿರುವುದು ಇನ್ನೂ ವಿಶೇಷ. ಬಹುಶಃ ಇದೇ ಮೊದಲು ಎನ್ನಬಹುದು. ಬಾಣವನ್ನು ಎಳೆದು ಹಿಡಿದಿರುವ ವೀರನ ಕೈ ಸವಕಲುಗೊಂಡಿದ್ದು, ಅವನ ಎಡಗೈಗಿಂತ ಬಲಗೈ ಉದ್ದವಾಗಿರುವಂತೆ ತೋರಿಸಲಾಗಿದೆ. ಇದೂ ಸಹ ವಿಶೇಷತೆಯಿಂದ ಕೂಡಿದೆ. ಏಕೆಂದರೆ, ಸಾಮಾನ್ಯವಾಗಿ ನಾವು ಒಂದು ಫೋಟೋ ತೆಗೆದುಕೊಂಡರೆ, ನಮ್ಮ ದೇಹದ ಮುಂಭಾಗ ದೊಡ್ಡದಾಗಿ, ಆ ಭಾಗ ಮರೆಮಾಡಿರುವ ಇತರೆ ಭಾಗಗಳು ಚಿಕ್ಕದಾಗಿ ಕಂಡುಬರುತ್ತವೆ. ಅದೇ ರೀತಿಯ ರಚನೆ ಅಂದರೆ, ಇಲ್ಲಿ ಬಲಗೈ ಮುಂದಿದೆ ಮತ್ತು ಎಡಗೈಗೆ ಅಡ್ಡವಾಗಿದೆ ಎನ್ನುವುದನ್ನು ಅತ್ಯಂತ ನಿಖರವಾಗಿ ತೋರಿಸಲಾಗಿದೆ. ಇದನ್ನು ಮುನ್ನೋಟ ಪ್ರಧಾನ ಎನ್ನಬಹುದು. ಇಂದಿನ HD/3D ಛಾಯಾಚಿತ್ರದಂತೆ ಕಲ್ಪಿಸಿಕೊಳ್ಳಬಹುದು. ಧನುರ್ಧಾರಿಯಾಗಿರುವ ಈ ವೀರನು, ಸೊಂಟದಲ್ಲಿ ಬಾಕು ಅಥವಾ ಕತ್ತಿಯನ್ನು ಧರಿಸಿದ್ದಾನೆ.

ಇದೊಂದು ಅಂದಿನ ಯಾವುದೋ ಸಮುದಾಯವೊಂದರ ಸಾಂಸ್ಕೃತಿಕ ಸಂದರ್ಭದ ಭಾಗವಾಗಿದ್ದಂತೆ ತೋರುತ್ತದೆ. ಸಾಮಾನ್ಯವಾಗಿ ಬಾಕು ಅಥವಾ ಸೊಂಟಗತ್ತಿಗಳನ್ನು ಅಂದಿನ ಜನರು ಸಾಂಸ್ಕೃತಿಕ ಹಾಗೂ ಆತ್ಮರಕ್ಷಣೆಯ ಭಾಗವಾಗಿಯೂ ಧರಿಸುತ್ತಿದ್ದರು. ಆದರೆ, ಇಲ್ಲಿ ಗ್ರಾಮ ಅಥವಾ ಒಂದು ಸಮುದಾಯದ ಪ್ರಮುಖನೊಬ್ಬ ಧರಿಸಿರುವಂತೆ ಕಂಡುಬರುತ್ತದೆ. ಈ ಶಿಲ್ಪದಲ್ಲಿರುವ ವೀರನ ಸೊಂಟದ ವಸ್ತ್ರವನ್ನು ಗಮನಿಸಿದರೆ, ಅತ್ಯಂತ ಬಿಗಿ ಉಡುಪನ್ನು ಧರಿಸಿದ್ದು, ಅದರ ಮೇಲೆ ಅಲಂಕಾರಿಕ ಆಭರಣಗಳ ರಚನೆಗಳು ಕಂಡುಬರುತ್ತವೆ. ಕಾಲಿನಲ್ಲಿ ಅಲಂಕಾರಿಕ ಗೆಜ್ಜೆಯನ್ನೂ ಧರಿಸಿದ್ದಾನೆ. ತಾನು ಹಿಡಿದಿರುವ ಬಿಲ್ಲು, ಆ ಬಿಲ್ಲನ್ನು ಎದೆಗೇರಿಸಿರುವ ರೀತಿ, ಬಿಲ್ಲಿನ ನೂಲಿನೊಂದಿಗೆ ಎಳೆದು ಹಿಡಿದಿರುವ ಬಾಣ, ಆ ಎಳೆತದ ರಭಸವನ್ನು ತಡೆದುಕೊಳ್ಳಲು ಗಟ್ಟಿಯಾಗಿ ನೆಲಕ್ಕೂರಿರುವ ಕಾಲುಗಳು ಮತ್ತು ಇನ್ನೇನು ಬಾಣ ಪ್ರಯೋಗಿಸಲು ಕೇಂದ್ರೀಕರಿಸಿರುವ ಗುರಿ, ಎಳೆದಿಡಿದುಕೊಂಡಿರುವ ಬಾಣಕ್ಕೆ ಸಮನಾಂತರವಾಗಿ ಬಲಗಾಲನ್ನು ಅದಕ್ಕೆ ಹೊಂದಿಕೆಯಾಗುವಂತೆ ಎಡಗಾಲನ್ನು ಬಾಗಿಸಿ ನಿಂತಿರುವ ಸಿದ್ಧಭಂಗಿ ಇವೆಲ್ಲವೂ ಈ ಶಿಲ್ಪದಲ್ಲಿ ಅತ್ಯಂತ ಮನೋಜ್ಞ ಹಾಗೂ ನೈಜವಾಗಿ ಮೂಡಿಬಂದಿರುವುದನ್ನು ಗಮನಿಸಿದರೆ, ಅತ್ಯಂತ ವೃತ್ತಿಪರಿಣಿತ ಶಿಲ್ಪಿಯಿಂದಲೇ ಈ ವೀರನ ಶಿಲ್ಪ ರಚನೆಗೊಂಡಿರುವುದು ಮನನವಾಗುತ್ತದೆ.

ಈ ವೀರಗಲ್ಲನ್ನು ಪತ್ತೆಹಚ್ಚಲು ಸಹಾಯಕರಾದ ಸ್ನೇಹಿತ ಪಕ್ಕದ ಚವಡಕಮದಿನ್ನಿ ಗ್ರಾಮದ ಪ್ರಗತಿಪರ ರೈತ ರಾಮಣ್ಣ ಸಂ ಗೌಡರ, ಇದೇ ಗ್ರಾಮದ ಛಾಯಾಗ್ರಾಹಕ ಹನುಮಂತ ಹಂಡಿ ಅವರನ್ನು, ಕ್ಷೇತ್ರಕಾರ್ಯದಲ್ಲಿ ಜೊತೆಗಿದ್ದು, ಅಧ್ಯಯನಕ್ಕೆ ಸಹಕರಿಸಿರುವ ಇತಿಹಾಸ ಉಪನ್ಯಾಸಕ ಕೂಡಲಸಂಗಮದ ಡಾ. ಆದಪ್ಪ ಮ. ಗೊರಚಿಕ್ಕನವರ ಇವರನ್ನು ಸ್ಮರಿಸುತ್ತೇನೆ. ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಿರುವ ಶೀಮಲದಿನ್ನಿಯ ಧನುರ್ಧಾರಿ ವೀರಗಲ್ಲನ್ನು ಈ ಸಂದರ್ಭಕ್ಕೆ ಲಭ್ಯವಿರುವ ಆಕರಗಳು ಮತ್ತು ಸ್ಥಳಿಯರ ಮಾಹಿತಿಯನ್ನಾಧರಿಸಿ ಅಪ್ರಕಟಿತ ವೀರಗಲ್ಲು ಎಂಬ ನಿಲುವಿಗೆ ಬಂದಿರುತ್ತೇನೆ. ಆದರೂ ಈ ಬಗ್ಗೆ ಸಂಶೋಧನೆ ನಡೆಸಿ ದಾಖಲಿಸುವ ಕಾರ್ಯಮಾಡಿದ್ದರೆ, ಅಂತಹ ಅಧ್ಯಯನಕಾರರ ವಿವರ ಸಂಶೋಧನಾ ಮಾಹಿತಿಗಳನ್ನು ಮುಕ್ತವಾಗಿ ಸ್ವೀಕರಿಸಿ ಮುಂದಿನ ಲೇಖನದಲ್ಲಿ ಮತ್ತಷ್ಟು ಹೊಸ ವಿಚಾರಗಳನ್ನು ತಿಳಿಸುವ ಇಚ್ಛೆಯನ್ನು ಹೊಂದಿದ್ದೇನೆ. ಪರಿಣಿತ ಸಂಶೋಧಕರ ಭೇಟಿ, ಇತಿಹಾಸ ಆಸಕ್ತರ ಆಗಮನದ ನೀರಿಕ್ಷೆ ಈ ವೀರಗಲ್ಲಿನ ಬಗ್ಗೆ ಹೊಸ

ಅಂಶಗಳನ್ನು ಅರಿಯಲು ಸಹಕಾರಿಯಾಗುತ್ತದೆ. ಅಧ್ಯಯನಕಾರರ ಮತ್ತು ಸಂಶೋಧನಾಸಕ್ತರ ನಿರಂತರ ಸಂಶೋಧನಾ ಹಾದಿಗೆ ಕೂಡಲಸಂಗಮ ಭಾಗದ ನೆಲ ಮತ್ತಷ್ಟು ಸನ್ನದ್ದಗೊಳ್ಳಲಿ ಎಂಬ ಸದಾಶಯದೊಂದಿಗೆ ಪ್ರಸ್ತುತ ಲೇಖನ ಬರವಣಿಗೆಯನ್ನು ಅತ್ಯಂತ ಸಂಭ್ರಮದಿಂದ ಓದುಗಲೋಕಕ್ಕೆ ಮಂಡಿಸುತ್ತಿದ್ದೇನೆ. ಓದುಗರು ರಚನಾತ್ಮಕವಾಗಿ ಪ್ರತಿಕ್ರಿಯಿಸಲೆಂದು ಆಶಿಸುತ್ತೇನೆ.